ಕರ್ನಾಟಕ ಸರ್ಕಾರ

**ಸಂಖ್ಯೆ: ಕಾಶಿಇ/199/ಪಿ.ಹೆಚ್.ಡಿ/ಎಂ.ಫಿಲ್/ಮುವೇಬ/ಸೇ.ವಿ-1/ 2010-11 (ಭಾಗ-2)**

ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ,
ಬೆಂಗಳೂರು, ದಿನಾಂಕ:20.07.2016.

**ಇವರಿಗೆ**

ಮಹಾಲೇಖಪಾಲರು,
ಕರ್ನಾಟಕ,
ಬೆಂಗಳೂರು

**ಮಾನ್ಯರೆ,**

**ವಿಷಯ:** ಕಾಲೇಜು ಶಿಕ್ಷಣ ಇಲಾಖೆಯ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಪ್ರಾಂಶುಪಾಲರು, ಸಹ/ಸಹಾಯಕ ಪ್ರಾಧ್ಯಾಪಕರು, ಗ್ರಂಥಪಾಲಕರು ಮತ್ತು ದೈಹಿಕ ಶಿಕ್ಷಣ ಬೋಧಕರು, ಇವರುಗಳು ಸೇವಾ ಪೂರ್ವ ಮತ್ತು ಸೇವಾ ಅವಧಿಯಲ್ಲಿ ಪಿ.ಹೆಚ್.ಡಿ./ಎಂ.ಫಿಲ್ ಪದವಿ ಪಡೆದ ಪ್ರಯುಕ್ತ ಈಗಾಗಲೇ ಮಂಜೂರು ಮಾಡಿರುವ ಮುಂಗಡ ವಾರ್ಷಿಕ ವೇತನ ಬಡ್ತಿಗಳನ್ನು ಪ್ರತ್ಯೇಕವಾಗಿ Non-Compounded ಆಗಿ ಪರಿವರ್ತಿಸಲಾಗಿರುವ ಪರಿಷ್ಕರಣೆಯನ್ನು ಈ ಪೂರ್ವದಲ್ಲಿ ಮಂಜೂರು ಮಾಡಿರುವಂತೆ ಮುಂದುವರೆಸುವ ಬಗ್ಗೆ.

**ಉಲ್ಲೇಖ:**
1. ಆಯುಕ್ತರ ಕಛೇರಿ, ಕಾಲೇಜು ಶಿಕ್ಷಣ ಇಲಾಖೆ, ಬೆಂಗಳೂರು ಇವರ ಆದೇಶ ಸಂಖ್ಯೆ: ಕಾಶಿಇ/515/ಪಿ.ಹೆಚ್.ಡಿ/ಎಂ.ಫಿಲ್/ಮುವೇಬ/2015-16/ಸೇವಿ-1, ದಿ:18.04.2016.
2. ಸರ್ಕಾರದ ಪತ್ರ ಸಂಖ್ಯೆ:ಇಡಿ/242/ಡಿಸಿಇ/2011, ದಿ:25.06.2016.

** ** **

ಸೂಚಿತ ವಿಷಯಕ್ಕೆ ಸಂಬಂಧಿಸಿದಂತೆ ಉಲ್ಲೇಖಿತ ಪತ್ರದಲ್ಲಿ ಪ್ರಸ್ತಾವನೆಯಲ್ಲಿ ವಿವರಿಸಿರುವಂತೆ ಉಲ್ಲೇಖ (1)ರಲ್ಲಿ ಸರ್ಕಾರಿ ಆದೇಶಗಳು/ಸುತ್ತೋಲೆಗಳಲ್ಲಿನ ಮಾರ್ಗಸೂಚಿಗಳನ್ವಯ ಕಾಲೇಜು ಶಿಕ್ಷಣ ಇಲಾಖೆಯ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಪ್ರಾಂಶುಪಾಲರು, ಸಹ/ಸಹಾಯಕ ಪ್ರಾಧ್ಯಾಪಕರು, ಗ್ರಂಥಪಾಲಕರು ಮತ್ತು ದೈಹಿಕ ಶಿಕ್ಷಣ ಬೋಧಕರು ಇವರುಗಳು ಪಿ.ಹೆಚ್.ಡಿ/ಎಂ.ಫಿಲ್ ಪದವಿ ಪಡೆದಿರುವ ಹಿನ್ನೆಲೆಯಲ್ಲಿ ನೇಮಕಾತಿ ಪೂರ್ವದಲ್ಲಿ ಅಥವಾ ನಂತರದಲ್ಲಿ ಪಿ.ಹೆಚ್.ಡಿ/ಎಂ.ಫಿಲ್ ಪದವಿ ಪಡೆದಿದ್ದಲ್ಲಿ 1996ರ ಯುಜಿಸಿ ವೇತನ ಶ್ರೇಣಿಯಲ್ಲಿ ವೇತನವನ್ನು ಪಡೆಯುತ್ತಿದ್ದು ಸದರಿ ಪದವಿಯು ಪಡೆದ ದಿನಾಂಕ/ನೇಮಕಾತಿ ದಿನಾಂಕ/ದಿನಾಂಕ:19.09.2007 ರಿಂದ ಅನ್ವಯವಾಗುವಂತೆ ಎರಡು/ನಾಲ್ಕು ಮುಂಗಡ ವೇತನ ಬಡ್ತಿಗಳನ್ನು ಈಗಾಗಲೇ ಮಂಜೂರಾತಿ ಮಾಡಿರುವ ಆದೇಶಗಳನ್ನು ಪರಿಶೀಲಿಸಿ ಸದರಿ ಮುಂಗಡ ವೇತನ ಬಡ್ತಿಗಳನ್ನು ಪರಿಷ್ಕರಿಸಿ ಪ್ರತ್ಯೇಕವಾಗಿ (Non-Compounded) ಮಂಜೂರಾತಿ ಮಾಡಿ ಆದೇಶ ಹೊರಡಿಸಲಾಗಿತ್ತು.

ಪ್ರಸ್ತುತ, ಸರ್ಕಾರವು ಉಲ್ಲೇಖ (2)ರ ಪತ್ರದಲ್ಲಿ ದಿನಾಂಕ:19.09.2007 ರಿಂದ 23.12.2009ರವರೆಗೆ ಪಡೆದಂತಹ ಪಿ.ಹೆಚ್.ಡಿ/ಎಂ.ಫಿಲ್ ಪದವಿಗಳನ್ನು ಪರಿಗಣಿಸಿ 1996ರ ಯುಜಿಸಿ ವೇತನ ಶ್ರೇಣಿಯಲ್ಲಿ ಮಂಜೂರು ಮಾಡಲಾಗುವ ಮುಂಗಡ ವೇತನ ಬಡ್ತಿಗಳನ್ನು ವಾರ್ಷಿಕ ವೇತನ

ಬಡ್ತಿಗಳಂತೆ ಪರಿಗಣಿಸುವಂತೆ ಸರ್ಕಾರವು ನಿರ್ದೇಶಿಸಿರುವ ಹಿನ್ನೆಲೆಯಲ್ಲಿ ಪ್ರಸ್ತುತ ಈ ಕಛೇರಿಯು ಉಲ್ಲೇಖ (1)ರ ಆದೇಶದಲ್ಲಿ ಮುಂಗಡ ವೇತನ ಬಡ್ತಿಗಳನ್ನು ಪ್ರತ್ಯೇಕವಾಗಿ (Non-Compounded) ಪರಿಷ್ಕರಣೆ ಮಾಡಿರುವುದನ್ನು ರದ್ದುಪಡಿಸುತ್ತಾ ಈ ಪೂರ್ವದಲ್ಲಿ ದಿನಾಂಕ:19.09.2007 ರಿಂದ 23.12.2009ರವರೆಗೆ ಪಡೆದಂತಹ ಪಿ.ಹೆಚ್.ಡಿ/ಎಂ.ಫಿಲ್ ಪದವಿಗಳನ್ನು ಪರಿಗಣಿಸಿ 1996ರ ಯುಜಿಸಿ ವೇತನ ಶ್ರೇಣಿಯಲ್ಲಿ ಮಂಜೂರು ಮಾಡಿರುವ ಮುಂಗಡ ವೇತನ ಬಡ್ತಿಗಳನ್ನು ವಾರ್ಷಿಕ ವೇತನ ಬಡ್ತಿಗಳಂತೆ ಮಂಜೂರಾತಿ ಮಾಡಿರುವುದನ್ನು ಸ್ಥಿರೀಕರಿಸಲಾಗಿದೆ.

ಮುಂದುವರೆದು, ಇಲಾಖೆಯು ವಿವಿಧ ಆದೇಶಗಳಲ್ಲಿ ಈ ಪೂರ್ವದಲ್ಲಿ ದಿನಾಂಕ:19.09.2007 ರಿಂದ 23.12.2009ರವರೆಗೆ ಪಡೆದಂತಹ ಪಿ.ಹೆಚ್.ಡಿ/ಎಂ.ಫಿಲ್ ಪದವಿಗಳನ್ನು ಪರಿಗಣಿಸಿ 1996ರ ಯುಜಿಸಿ ವೇತನ ಶ್ರೇಣಿಯಲ್ಲಿ ಮಂಜೂರು ಮಾಡಿರುವ ಮುಂಗಡ ವೇತನ ಬಡ್ತಿಗಳನ್ನು ವಾರ್ಷಿಕ ವೇತನ ಬಡ್ತಿಗಳಂತೆ ಮಂಜೂರಾತಿ ಮಾಡಿರುವುದನ್ನು ಮುಂದುವರಿಸಲಾಗಿದೆ ಎಂಬ ಅಂಶಗಳನ್ನು ಮುಂದಿನ ಅಗತ್ಯ ಕ್ರಮಕ್ಕಾಗಿ ಸಲ್ಲಿಸಲಾಗಿದೆ.

ತಮ್ಮ ವಿಶ್ವಾಸಿ

ಅಡಕ: ದಿ:25.06.2016ರ ಸರ್ಕಾರದ ಪತ್ರ.
ಮತ್ತು ದಿ:11.07.2016ರ ಇಲಾಖೆಯ ಪತ್ರ.

ಕಾಲೇಜು ಶಿಕ್ಷಣ ನಿರ್ದೇಶಕರು

**ಪ್ರತಿ:**

1. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಶಿಕ್ಷಣ ಇಲಾಖೆ (ಉನ್ನತ ಶಿಕ್ಷಣ), ಕರ್ನಾಟಕ ಸರ್ಕಾರದ ಸಚಿವಾಲಯ, ಬಹುಮಹಡಿಗಳ ಕಟ್ಟಡ, ಬೆಂಗಳೂರು – ಮಾಹಿತಿಗಾಗಿ.
2. ಎಲ್ಲಾ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಪ್ರಾಂಶುಪಾಲರುಗಳಿಗೆ – ಮಾಹಿತಿ ಹಾಗೂ ಅಗತ್ಯ ಕ್ರಮಕ್ಕಾಗಿ.
3. ವ್ಯವಸ್ಥಾಪಕರು/ಅಧೀಕ್ಷಕರು, ಕಾನೂನು ಕೋಶ ವಿಭಾಗ, ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ, ಬೆಂಗಳೂರು – ಮಾಹಿತಿಗಾಗಿ.
4. ವ್ಯವಸ್ಥಾಪಕರು/ಅಧೀಕ್ಷಕರು, ಬಡ್ತಿ & ಸ್ಥಾನಿಕರಣ ವಿಭಾಗ, ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ, ಬೆಂಗಳೂರು – ಮಾಹಿತಿಗಾಗಿ
5. ಕಛೇರಿ ಪ್ರತಿ.

ಕರ್ನಾಟಕ ಸರ್ಕಾರ

ಸಂಖ್ಯೆ: ಕಾಶಿಇ/199/ಮುವೇಬ/ಸೇ.ವಿ-1/2010-11

ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ,
ಬೆಂಗಳೂರು, ದಿನಾಂಕ:11.07.2016.

ಇವರಿಗೆ

ಮಹಾಲೇಖಪಾಲರು,
ಕರ್ನಾಟಕ,
ಬೆಂಗಳೂರು

ಮಾನ್ಯರೆ,

**ವಿಷಯ:** ಕಾಲೇಜು ಶಿಕ್ಷಣ ಇಲಾಖೆಯ ಪ್ರಾಂಶುಪಾಲರು/ಪ್ರಾಧ್ಯಾಪಕರುಗಳು/ದೈಹಿಕ ಶಿಕ್ಷಣ ಬೋಧಕರು/ಗ್ರಂಥಪಾಲಕರಿಗೆ ಪಿ.ಹೆಚ್.ಡಿ/ಎಂ.ಫಿಲ್ ಮುಂಗಡ ವೇತನ ಬಡ್ತಿಗಳನ್ನು ಮಂಜೂರು ಮಾಡುವ ಬಗ್ಗೆ.

**ಉಲ್ಲೇಖ:** ಸರ್ಕಾರದ ಪತ್ರ ಸಂಖ್ಯೆ:ಇಡಿ/242/ಡಿಸಿಇ/2011, ದಿ:25.06.2016.

** ** **

ಸೂಚಿತ ವಿಷಯಕ್ಕೆ ಸಂಬಂಧಿಸಿದಂತೆ ಉಲ್ಲೇಖಿತ ಪತ್ರದಲ್ಲಿ ಇಲಾಖಾ ವ್ಯಾಪ್ತಿಯಲ್ಲಿ ಬರುವ ಪ್ರಾಂಶುಪಾಲರು/ಪ್ರಾಧ್ಯಾಪಕರು/ದೈಹಿಕ ಶಿಕ್ಷಣ ಬೋಧಕರು/ಗ್ರಂಥಪಾಲಕರು ಇವರುಗಳು ದಿನಾಂಕ:19.09.2007 ರಿಂದ 23.12.2009ರವರೆಗೆ ಪಡೆದಂತಹ ಪಿ.ಹೆಚ್.ಡಿ/ಎಂ.ಫಿಲ್ ಪದವಿಗಳನ್ನು ಪರಿಗಣಿಸಿ 1996ರ ಯುಜಿಸಿ ವೇತನ ಶ್ರೇಣಿಯಲ್ಲಿ ಮಂಜೂರು ಮಾಡಲಾಗುವ ಮುಂಗಡ ವೇತನ ಬಡ್ತಿಗಳನ್ನು ವಾರ್ಷಿಕ ವೇತನ ಬಡ್ತಿಗಳಂತೆ ಪರಿಗಣಿಸುವಂತೆ ಸರ್ಕಾರವು ನಿರ್ದೇಶಿಸಿರುವುದರಿಂದ ಸದರಿ ಸರ್ಕಾರದ ಪತ್ರದ ಪ್ರತಿಯನ್ನು ಮುಂದಿನ ಕ್ರಮಕ್ಕಾಗಿ ಕಳುಹಿಸಿಕೊಡಲಾಗಿದೆ.

ತಮ್ಮ ವಿಶ್ವಾಸಿ

ಅಡಕ: ದಿ:25.06.2016ರ ಸರ್ಕಾರದ ಪತ್ರ.

ಕಾಲೇಜು ಶಿಕ್ಷಣ ನಿರ್ದೇಶಕರು

ಪ್ರತಿ:

1. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಶಿಕ್ಷಣ ಇಲಾಖೆ (ಉನ್ನತ ಶಿಕ್ಷಣ), ಕರ್ನಾಟಕ ಸರ್ಕಾರದ ಸಚಿವಾಲಯ, ಬಹುಮಹಡಿಗಳ ಕಟ್ಟಡ, ಬೆಂಗಳೂರು – ಮಾಹಿತಿಗಾಗಿ.
2. ಎಲ್ಲಾ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಪ್ರಾಂಶುಪಾಲರುಗಳಿಗೆ-ಮಾಹಿತಿಗಾಗಿ.
3. ಕಛೇರಿ ಪ್ರತಿ.

ಕರ್ನಾಟಕ ಸರ್ಕಾರ

ಸಂಖ್ಯೆ:ಇಡಿ 242 ಡಿಸಿಇ 2011

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿಗಳ ಕಟ್ಟಡ,
ಬೆಂಗಳೂರು, ದಿನಾಂಕ:25-06-2016

<u>ಇಂದ:</u>

ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ,
ಶಿಕ್ಷಣ ಇಲಾಖೆ (ಉನ್ನತ ಶಿಕ್ಷಣ)
ಬೆಂಗಳೂರು.

ಕಾಲೇಜು ಶಿಕ್ಷಣ ಆಯುಕ್ತರ ... ಸಂಖ್ಯೆ ... ದಿನಾಂಕ 28 JUN 2016

<u>ರವರಿಗೆ:</u>

ಕಾಲೇಜು ಶಿಕ್ಷಣ ಆಯುಕ್ತರು,
ಬೆಂಗಳೂರು - 560 001.

ಮಾನ್ಯರೆ,

ವಿಷಯ: ಕಾಲೇಜು ಶಿಕ್ಷಣ ಇಲಾಖೆಯ ಪ್ರಾಂಶುಪಾಲರು / ಪ್ರಾಧ್ಯಾಪಕರುಗಳು / ದೈಹಿಕ ಶಿಕ್ಷಣ ಬೋಧಕರು / ಗ್ರಂಥಪಾಲಕರಿಗೆ ಪಿಹೆಚ್.ಡಿ/ಎಂ.ಫಿಲ್ ಮುಂಗಡ ವೇತನ ಬಡ್ತಿಗಳನ್ನು ಮಂಜೂರು ಮಾಡುವ ಬಗ್ಗೆ.

ಉಲ್ಲೇಖ: ಇದೇ ಸಮಸಂಖ್ಯೆಯ ದಿನಾಂಕ:19.12.2011 ಮತ್ತು 05.05.2015

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖಿತ ಪತ್ರಗಳಲ್ಲಿ ನೀಡಲಾಗಿರುವ ಸೂಚನೆಗಳ ಹಿನ್ನೆಲೆಯಲ್ಲಿ ದಿನಾಂಕ:19.09.2007 ರಿಂದ 23.12.2009ರವರೆಗೆ ಪಡೆದಂತಹ ಪಿಹೆಚ್‌ಡಿ/ಎಂ.ಫಿಲ್ ಪದವಿಗಳನ್ನು ಪರಿಗಣಿಸಿ 1996ರ ಯು.ಜಿ.ಸಿ. ವೇತನ ಶ್ರೇಣಿಯಲ್ಲಿ ಮಂಜೂರು ಮಾಡಲಾಗುವ ಮುಂಗಡ ವೇತನ ಬಡ್ತಿಗಳನ್ನು ವಾರ್ಷಿಕ ವೇತನ ಬಡ್ತಿಗಳಂತೆ ಪರಿಗಣಿಸುವಂತೆ ತಿಳಿಸಲು ನಿರ್ದೇಶಿತನಾಗಿದ್ದೇನೆ.

ತಮ್ಮ ನಂಬುಗೆಯ,

(ಕೆ.ಶಿವಲಿಂಗಯ್ಯ)
ಸರ್ಕಾರದ ಅಧೀನ ಕಾರ್ಯದರ್ಶಿ
ಶಿಕ್ಷಣ ಇಲಾಖೆ (ಕಾಲೇಜು ಶಿಕ್ಷಣ)

ಕಾಲೇಜು ಶಿಕ್ಷಣ ನಿರ್ದೇಶಕರ ಅಪ್ಪೆಶಾಖೆ
ಕ್ರಮ ಸಂಖ್ಯೆ: 258
ದಿನಾಂಕ: 30/6/16